ಶರೀರಾದ್ಯಂತ ವ್ಯಾಪಿಸಿದಂತೆ ಅವಳು ಬೆವರಿ ಹೋಗಿದ್ದಳು. ಅರೆಚಣದ ತಬ್ಬುಗೆ. ಅರೆಚಣದ ಸಾಮೀಪ್ಯಸುಖ. ಇದು ಈ ಜನ್ಮದ್ದಲ್ಲ, ಜನ್ಮಜನ್ಮಾಂತರದ ಅನುಬಂಧ ಎನಿಸುವಂತಾ ಭಾವೋದ್ರೇಕ. ಅಲ್ಲಿಂದ ಕಾಲು ಕೀಳುವ ಮುನ್ನ ಅವನ ಕೈ ಹಿಡಿದು ಅಮುಕಿ ಕಾವೇರಿ ಎಚ್ಚರಿಸಿದ್ದಳು,

"ಇನ್ನ್ಯಾವತ್ತೂ ಇಂತಾ ಸಾಹಸ ಮಾಡೋಕೆ ಹೋಗ್ಬೇಡಿ. ಇಬ್ರನ್ನೂ ಕೊಂದು ಗೊಬ್ಬರದ ಗುಂಡೀಲಿ ಹೂತು ಹಾಕ್ತಾರೆ."

"ನಿಮ್ಮನ್ನ ಬಿಟ್ಟು ಬದುಕಲ್ಲ ನಾನು. ನೀವೇನಾದ್ರೂ ಕೈಬಿಟ್ರೆ ಆತ್ಮಹತ್ಯೆ ಮಾಡ್ಕೋತೀನಿ."

"ಯೋಚ್ನೆ ಮಾಡ್ಬೇಡಿ. ನಾನೂ ನಿಮ್ಜೊತೆ ಬರ್ತೀನಿ..." ಮಾತಿಗೆ ಪೂರಕವೆಂಬಂತೆ ಪರಸ್ಪರರ ಕೈಗಳು ಬಂದಿಯಾಗಿ, ಅದೇನು ಶಪಥ ಮಾಡಿದ್ವಾ? ಹೌದು, ಹೌದೇ ಹೌದು.

★★★

ಕಾವೇರಿಯನ್ನು ನೋಡಲು ಬಂದ ಮೊದಲ ಹುಡುಗನೇ ಅವಳನ್ನು ಪಾಸು ಮಾಡಿದ. ಮನೆಯಲ್ಲಿ ಸಂಭ್ರಮದ ಉಬ್ಬು. ಪ್ರೇಮಿಗಳಲ್ಲಿ ವಿಪರೀತದ ತೊಳಲಾಟ. ಜಾತಿಯ ಅಡ್ಡಗೋಡೆ ಇಲ್ಲದಿದ್ದರೆ ಕಾವೇರಿ ವಿಷಯವನ್ನು ಮನೆಯವರೆದುರು ಬಹಿರಂಗಪಡಿಸಿ ಬರುವ ಅಡೆತಡೆಗಳಿಗೆ ತಲೆಯೊಡ್ಡಿ ನಿಲ್ಲುತ್ತಿದ್ದಳೇನೋ. ಮನೆಯವರು ತಮ್ಮ ಈ ಪ್ರೀತಿಗೆ ಸಮ್ಮತಿಸಬಹುದೆಂದು ಕನಸಲ್ಲೂ ಕಲ್ಪಿಸಿಕೊಳ್ಳುವಂತಿಲ್ಲ. ಮುಂದೇನು?

"ನೀವು ಧೈರ್ಯ ಮಾಡ್ಬೇಕು. ನನಗೆ ಧೈರ್ಯ ಇದೆ" ಎಂದ ಮೋಹನ, ಪತ್ರಮುಖೇನ. ಧೈರ್ಯ ಮಾಡಿದಳು ಕಾವೇರಿ. ತಮ್ಮ ಪ್ರೀತಿ ಫಲಿಸಬೇಕೆಂದರೆ ಧೈರ್ಯ ಮಾಡಲೇಬೇಕಿತ್ತು. ಕಾಲ ಮಿಂಚಿದ ಮೇಲೆ ಪರಿತಪಿಸಿದರೆ ಪ್ರಯೋಜನವಿರಲಿಲ್ಲ. ಒಂದು ನಡುರಾತ್ರಿ ಎಲ್ಲರೂ ಗಾಢನಿದ್ದೆಯಲ್ಲಿರುವಾಗ ಮೋಹನನೊಡನೆ ಮನೆ ಬಿಟ್ಟು ಹೊರಟುಬಿಟ್ಟಳು ಕಾವೇರಿ. ಮೋಹನನಿಗೆ ಆಪ್ತನಾಗಿದ್ದವನೊಬ್ಬನ ಬಾಡಿಗೆ ಕಾರು ಫರ್ಲಾಂಗ್ ದೂರದಲ್ಲಿ ಕಾದಿತ್ತು. ಬೆಳಗಾಗುವಷ್ಟರಲ್ಲಿ ಒಲಿದ ಜೋಡಿ ದೂರ ದೂರ ಬೆಂಗಳೂರಿನ ದಿಕ್ಕಿಗೆ ಹಾರಿ ಹೋಗಿತ್ತು.

★★★

"ಮೊದಲು ಮದುವೆ ಆಗಲಿ, ಮನೆಗೆ ಸುದ್ದಿ ಕೊಡೋ ವಿಷಯ ಆಮೇಲೆ ನೋಡ್ಕಂಡ್ರಾಯ್ತು" ಹೇಳಿದ್ದ ಮೋಹನ. ಅವನ ಮನೆಯವರಿಗೂ ಅವನು ತಿಲಮಾತ್ರ ಗುಟ್ಟು ಬಿಟ್ಟುಕೊಟ್ಟಿರಲಿಲ್ಲ. ರಜೆ ಹಾಕದೆ ಊರು ಬಿಟ್ಟು ಬಂದಿದ್ದರಿಂದ, ಹೀಗೆ ಎಷ್ಟು ಕಾಲ ತಲೆ ಮರೆಸಿಕೊಂಡಿರಬೇಕೋ ಗೊತ್ತಿಲ್ಲದಿರುವುದರಿಂದ, ಹೊಸ ಕೆಲಸ ಹುಡುಕಿಕೊಳ್ಳಲು ಅವನು ಮಾನಸಿಕವಾಗಿ ತಯಾರಾಗಿಬಿಟ್ಟಿದ್ದ. ಅಲ್ಲಿಯವರೆಗಿನ ಬದುಕಿಗೆ ಅವನ ಉಳಿತಾಯದ ಮೊತ್ತ ಸಾಕಾದೀತೆಂದು ಅವನ ನಂಬುಗೆ. ಯಾವ ಅಪಾಯಕ್ಕೂ ಎದೆಗೊಟ್ಟೇನೆನ್ನುವ ಧೈರ್ಯ ತುಂಬಲು ಪ್ರೀತಿಗಿಂತಾ ಮಿಗಿಲಾದ ಬ್ರಹ್ಮಾಸ್ತ್ರ ಜಗತ್ತಿನಲ್ಲಿ ಮತ್ತೇನುಂಟು? ರಿಜಿಸ್ಟ್ರಾರ್ ಆಫೀಸಿನಲ್ಲಿ ಕಾನೂನುಬದ್ಧ ವಿವಾಹದ ಕನವರಿಕೆಯಲ್ಲಿ ಊರು ಬಿಟ್ಟು ಬಂದವರಿಗೆ ಆ ಕನಸನ್ನು ನನಸಾಗಿಸಿಕೊಳ್ಳಲು ಬಿಡಲಿಲ್ಲ ದುರ್ವಿಧಿ. ಸರ್ಪಸುತ್ತು ತನ್ನ ಸುತ್ತು ಪೂರ್ಣಗೊಳಿಸಿ ಅವಳ ಬದುಕನ್ನು ಆಹುತಿ ತೆಗೆದುಕೊಳ್ಳುವುದರ ಕ್ಷಣ ಬಂದೇಬಿಟ್ಟಿತ್ತಾ? ತಮ್ಮ ನಿಷ್ಕಳಂಕ ಪ್ರೀತಿಯನ್ನು ಹೋಲಿಸಬಹುದಾ ಸರ್ಪಸುತ್ತಿಗೆ? 'ತಪ್ಪು, ತಪ್ಪು' ಅನಿಸುತ್ತಿದ್ದರೂ ಮಾಸದ ಕಲೆ ಉಳಿಸಿ ಹೋದ ಅದನ್ನು ಸರ್ಪಸುತ್ತಿಗೆ ಹೋಲಿಸಿದರೆ ತಪ್ಪೇನಿದೆ? ಕೊನೆಗೂ ಅದು ಕೊಡಮಾಡಿದ್ದು ನೋವನ್ನಷ್ಟೇ ತಾನೇ? ಸಾಹಸ ಮರೆದು ಪ್ರೀತಿಯನ್ನು